**ಮಧ್ಯಂತರ ಅರ್ಜಿಯ ಆದೇಶದ ಮೇರೆಗೆ**

**ದಿನಾಂಕ 10.06.2026 ರಂದು ಸಾಕ್ಷಿಯನ್ನು ಪುನಃ ಕರೆಸಿ ಪ್ರತಿಜ್ಞಾವಿಧಿ ಬೋಧಿಸಲಾಯಿತು.**

**ಪಾಟೀ ಸವಾಲುಃ 2 ನೇ ಪ್ರತಿ**ವಾದಿ ಪರ HHA ವಕೀಲರಿಂದ

ನನಗೆ ಓದಲು ಬರೆಯಲು ಬರುವುದಿಲ್ಲ. ಪ್ರಮಾಣ ಪತ್ರದಲ್ಲಿ ಬರೆದ ಸಂಗತಿಗಳು ಗೊತ್ತು. ನನ್ನ ತಾತ ಹೊನ್ನ ಗುಡಿಯಪ್ಪನಿಗೆ ನಾಗಮ್ಮ, ಹನುಮಂತಿ ಮತ್ತು ನಿಂಗಮ್ಮ ಎಂದುಲ 3 ಹೆಂಡತಿಯರು ಇರುತ್ತಾರೆ. ನಾಗಮ್ಮ ಸಂತಾನವಿಲ್ಲದೇ ಮೃತಪಟ್ಟ ನಂತರ ಹನುಮಂತಿಯನ್ನು ವಿವಾಹ ಆಗಿರುತ್ತಾನೆ. ಹನುಮಂತಿಗೆ ಹೊನ್ನಪ್ಪ ಎಂಬ ಮಗ ಮತ್ತು ಶಿವಲಿಂಗಮ್ಮ ಎಂಬ ಮಗಳು ಇರುತ್ತಾರೆ. ನಿಂಗಮ್ಮಳಿಗೆ 6 ಜನ ಮಕ್ಕಳು ಇರುತ್ತಾರೆ. ನಾನು ಹನುಮಂತಿಯ ಮೊಮ್ಮಗನಾಗಿರುತ್ತೇನೆ. ದಾವ ಜಮೀನು ಸ.ನಂ.29 ಆಗಿರುತ್ತದೆ. ಸದರಿ ಸ.ನಂ.29 ರಲ್ಲಿ 11-12 ಎಕರೆ ಇರುತ್ತದೆ. ಈ ದಾವೆಯನ್ನು ಭಾಗಕ್ಕಾಗಿ ಸಲ್ಲಿಸಿರುತ್ತೇನೆ. ದಾವೆಯನ್ನು ನಾನು 7 ಜನರ ವಿರುದ್ಧ ದಾಖಲು ಮಾಡಿರುತ್ತೇನೆ. ದಾವ ಜಮೀನುಗಳಲ್ಲಿ ಪ್ರತಿವಾದಿಗಳೇ ಸಾಗುವಳಿ ಮಾಡುತ್ತಿದ್ದಾರೆ. ಸ.ನಂ.29/1/3 ರಲ್ಲಿ 1 ಎಕರೆ 5 ಗುಂಟೆಯನ್ನು 3 ಮತ್ತು 6 ನೇ ಪ್ರತಿವಾದಿಗಳು ಖರೀದಿ ಮಾಡಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ. ಖರೀದಿ ಪತ್ರ ನ್ಯಾಯಾಲಯಕ್ಕೆ ಹಾಜರು ಮಾಡಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ. ನ್ಯಾಯಾಲಯಕ್ಕೆ ವಂಶಾವಳಿ ಸಲ್ಲಿಸಿರುತ್ತೇನೆ.

ಈ ಹಂತದಲ್ಲಿ ಮುಂದುವರೆದ ಪಾಟೀ ಸವಾಲಿಗೆ ಕಾಲವಕಾಶವನ್ನು ಕೋರಿದ್ದರಿಂದ ಮುಂದೂಡಲಾಯಿತು.

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯನ್ನು ನನ್ನ ಉಖ್ತಲೇಖನದ ಮೇರೆಗೆ ಬೆರಳಚ್ಚು ಮಾಡಲಾಗಿದೆ)

ಓ.ಹೇ.ಕೇ.ಸರಿ.ಇದೆ.

ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ,
ದೇವದುರ್ಗ.